ಸಮಾಜ ಕಲ್ಯಾಣ ಜಿಲ್ಲಾಧಿಕಾರಿಗಳ ಬಗ್ಗೆ.

ಶೀರ ಶ್ರೀ ಕರಿಯಣ್ಣ (ಹೊಳೇ ಹೊನ್ನೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ರಾಜ್ಯದಲ್ಲಿ ಎಷ್ಟು ಜನ ಸಮಾಜ ಕಲ್ಯಾಣ ಜಿಲ್ಲಾಧಿಕಾರಿಗಳು ಇದ್ದಾರೆ. ಈ ಪೈಕಿ ಹರಿಜನ ಗಿರಿಜನರೆಷ್ಟು, ಹಾಗೂ ಯಾವ ಯಾವ ಜಿಲ್ಲೆಯಲ್ಲಿದ್ದಾರೆ.

ಆ) ಸಮಾಜ ಕಲ್ಯಾಣ ಜಿಲ್ಲಾಧಿಕಾರಿಗಳಿಗೆ ಹರಿಜನ ಗಿರಿಜನರ ಜಾತಿ ಸರ್ಟಿಫಿಕೇಟ್ ಕೊಡಲು ಅಧಿಕಾರ ನೀಡದಿರಲು ಕಾರಣವೇನು ?

ಇ) ಅಧಿಕಾರಿಗಳಿಗೆ ಜಾತಿ ಸರ್ಟಿಫಿಕೇಟ್ ನೀಡಲು ಅಧಿಕಾರ ಕೊಡುವಲ್ಲಿ ಸರ್ಕಾರಕ್ಕೆ ಇರುವ ತೊಂದರೆಯೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ರಾಜ್ಯದಲ್ಲಿ ಒಟ್ಟು ೨೦ ಜನ ಸಮಾಜ ಕಲ್ಯಾಣ ಜಿಲ್ಲಾಧಿಕಾರಿಗಳಿದ್ದು, ಇವರ ಪೈಕಿ ೩ ಜನ ಹರಿಜನ ಕೋಮಿಗೂ, ಒಬ್ಬ ಗಿರಿಜನ ಕೋಮಿಗೂ ಸೇರಿದವರಾಗಿರುತ್ತಾರೆ. ಹರಿಜನ ಕೋಮಿಗೆ ಸೇರಿದ ೩ ಜನ ಅಧಿಕಾರಿಗಳು ಬೆಂಗಳೂರು (ನಗರ) ಮಂಡ್ಯ ಜಿಲ್ಲೆ ಮತ್ತು ಧಾರವಾಡದಲ್ಲಿ ಗಿರಿಜನ ಪಂಗಡಕ್ಕೆ ಸೇರಿದ ಒಬ್ಬ ಅಧಿಕಾರಿಯು ಚಿಕ್ಕಮಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ.

ಆ) ಸರ್ಕಾರದ ಆದೇಶದ ಕ್ರಮ ಸಂಖ್ಯೆ. ಎಸ್‌ಡಬ್ಲ್ಯೂಎಲ್ ೨೧೩ ಎಸ್‌ಎಡಿ ೮೫ ದಿನಾಂಕ ೨೩-೩-೮೭ರ ಪ್ರಕಾರ ಕಂದಾಯ ಇಲಾಖೆಯ ತಹಶೀಲ್ದಾರ್‌ರವರಿಗಿಂತ ತಳಹಂತದ ಬೇರೆ ಅಧಿಕಾರಿಗಳಿಗೆ ಜಾತಿಯ ಪ್ರಮಾಣ ಪತ್ರಗಳನ್ನು ಕೊಡುವ ಅಧಿಕಾರ ವಿರುವುದಿಲ್ಲ.

ಇ) ಮೇಲಿನ ಸರ್ಕಾರದ ಆದೇಶದ ಅನ್ವಯದಂತೆ ಅಧಿಕಾರಿಗಳಿಗೆ ಜಾತಿಯ ಪ್ರಮಾಣ ಪತ್ರವನ್ನು ಕೊಡಲು ಅಧಿಕಾರವಿರುವುದಿಲ್ಲ.

ಶ್ರೀ ಕರಿಯಣ್ಣ.—ನಾನು ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಜಾತಿ ಸರ್ಟಿಫಿಕೇಟ್ ಕೊಡುವುದಕ್ಕೆ ಏತಕ್ಕೆ ಅಧಿಕಾರದ ಕೊಟ್ಟಿಲ್ಲ ಎಂದು ಕೇಳಿದ್ದೇನೆ. ಮಾನ್ಯ ಮಂತ್ರಿಗಳು ಉತ್ತರದಲ್ಲಿ ಆ ಅಧಿಕಾರವನ್ನು ತಹಶೀಲ್ದಾರರಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಅಧಿಕಾರ ಏತಕ್ಕೆ ಕೊಟ್ಟಿಲ್ಲ ? ಜಾತಿ ಸರ್ಟಿಫಿಕೇಟ್ ನೀಡಲು ಇವರಿಗೆ ಅಧಿಕಾರ ಕೊಡುವಲ್ಲಿ ಸರ್ಕಾರಕ್ಕೆ ಏನಾದರೂ ತೊಂದರೆ ಇದೆಯೇ ಎಂದು ಕೇಳಿದರೆ ಬರೀ ತಹಶೀಲ್ದಾರರಿಗೆ ಅಧಿಕಾರ ಕೊಟ್ಟಿದ್ದೇವೆಂದು ಹೇಳಿದ್ದಾರೆಯೇ ವಿನಃ ಸರ್ಕಾರದ ತೊಂದರೆ ಹೇಳಿಲ್ಲ. ಸಮಾಜ ಕಲ್ಯಾಣ ಅಧಿಕಾರಿಗೆ ಜಾತಿ ಸರ್ಟಿಫಿಕೇಟ್ ಕೊಡುವುದಕ್ಕೆ ಏಕೆ ಅಧಿಕಾರ ಕೊಟ್ಟಿಲ್ಲ ಎನ್ನುವುದನ್ನು ಹೇಳಿಲ್ಲ ಆದ್ದರಿಂದ ಇದರ ಬಗ್ಗೆ ವಿವರಣೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ. ಶಿವಣ್ಣ.—ಇದು ಸೆಂಟ್ರಲ್ ಗೌರ್ನಮೆಂಟ್ ವ್ಯಾಪ್ತಿಗೆ ಬರುತ್ತದೆ. ಅವರು ಸರ್ಕ್ಯುಲರ್ ಕಳುಹಿಸಿದ್ದಾರೆ. ಅದರ ಪ್ರಕಾರ ಸೋಷಿಯಲ್ ವೆಲ್‌ಫೇರ್ ಆಫೀಸರ್ಸ್‌ಗೆ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುವ ಅಧಿಕಾರ ಬರುವುದಿಲ್ಲ.

ಶ್ರೀ ಕರಿಯಣ್ಣ.—ಹರಿಜನ ಗಿರಿಜನರ ಹಿತದೃಷ್ಟಿಗಾಗಿ ಸಮಾಜ ಕಲ್ಯಾಣ ಇಲಾಖೆ ಇದೆ. ಆದರೆ ಆ ಇಲಾಖೆಯ ಅಧಿಕಾರಿಗಳಿಗೆ ಜಾತಿ ಸರ್ಟಿಫಿಕೇಟ್ ಕೊಡುವ ಅಧಿಕಾರ ಕೊಟ್ಟಿಲ್ಲ ಎಂದು ಹೇಳಿದರೆ ಏನರ್ಥ ? ಸರ್ಕಾರಕ್ಕೆ ತೊಂದರೆ ಏನಿದೆ?

ಶ್ರೀ ಬಿ. ಶಿವಣ್ಣ.—ಈ ಬಗ್ಗೆ ಗೌರ್ನಮೆಂಟ್ ಆಫ್ ಇಂಡಿಯಾದವರ ನಿರ್ಣಯ ಇದೆ. ಸರ್ಟಿಫೈ ಮಾಡುವುದು ಜವಾಬ್ದಾರಿ ಕೆಲಸ ಅದಕ್ಕಾಗಿ ಸೋಷಿಯಲ್ ವೆಲ್‌ಫೇರ್ ಅಧಿಕಾರಿಗಳಿಗೆ ಅಧಿಕಾರ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಡಿಸ್ಟ್ರಿಕ್ಟ್ ಸೋಷಿಯಲ್ ವೆಲ್‌ಫೇರ್ ಆಫೀಸರ್ಸ್ ದರ್ಜೆ ತಹಸೀಲ್ದಾರ್ ದರ್ಜೆಗಿಂತ ಕಡಿಮೆಯೇ ?

ಶ್ರೀ ಬಿ. ಶಿವಣ್ಣ.—ತಹಸೀಲ್ದಾರರಿಗೇ ಅಧಿಕಾರ ಇರಬೇಕೆಂದಿದೆ.

ಅಧ್ಯಕ್ಷರು.—ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳ ರ್‍ಯಾಂಕ್ ಏನು ? It is equal to the rank of Tahasildar or Assistant Commissioner ?

ಶ್ರೀ ಬಿ. ಶಿವಣ್ಣ.—ಆಲ್ಲಿ ಪೆನ್‌ಷನ್ ಮಾಡಿಲ್ಲ, ಬರೀ ನೇಮ್ಸ್ ಹೇಳಿದ್ದಾರೆ.

ಶ್ರೀ ಕರಿಯಣ್ಣ.—ಅಸಿಸ್ಟೆಂಟ್ ಕಮಿಷನರ್ ಗ್ರೇಡ್‌ನಲ್ಲಿ ಇರುತ್ತಾರೆ. It is not the direction from the central Government. It is the direction of the state Government to issue caste certificates by Tahasildar. ಮಾನ್ಯ ಮಂತ್ರಿಗಳು ಹೇಳತಕ್ಕದ್ದು ಸಮರ್ಪಕವಾಗಿಲ್ಲ. ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಜಾತಿ ಸರ್ಟಿಫಿಕೇಟ್ ಕೊಡುವುದಕ್ಕೆ ಏಕೆ ಅಧಿಕಾರ ಇಲ್ಲ ಎನ್ನುವುದನ್ನು ತಿಳಿಸಿ ಆ ಸಮಾಜದ ಉದ್ಧಾರಕ್ಕೆ ಈ ಒಂದು ಇಲಾಖೆಯನ್ನು ಇಟ್ಟಿದ್ದೀರಿ. ಈ ಇಲಾಖೆಯ ಅಧಿಕಾರಿಗಳಿಗೆ ಸಾಕಷ್ಟು ಸಂಬಳ ಕೊಡುತ್ತಿದ್ದೀರಿ. ಆ ಇಲಾಖೆ ಅಧಿಕಾರಿಗೆ ಒಂದು ಜಾತಿ ಸರ್ಟಿಫಿಕೇಟ್ ಕೊಡುವುದಕ್ಕೆ ನೀವು ಅಧಿಕಾರ ಕೊಡದೇ ಹೋದರೆ ಆ ಇಲಾಖೆ ಏಕೆ ಇರಬೇಕಂ ?

ಶ್ರೀ ಬಿ. ಶಿವಣ್ಣ.—ಕೇಂದ್ರ ಸರ್ಕಾರದ ಸರ್ಕ್ಯುಲರ್ ಪ್ರಕಾರ ಸೋಶಿಯಲ್ ವೆಲ್‌ಫೇರ್ ಆಫೀಸರ್‌ಗೆ ಜಾತಿ ಸರ್ಟಿಫಿಕೇಟ್ ಕೊಡುವುದಕ್ಕೆ ಬರುವುದಿಲ್ಲ ಆದಕಾರಣ ಇದನ್ನು ಪರಿಶೀಲನೆ ಮಾಡುವುದಕ್ಕೆ ನಾವು ಕೇಂದ್ರ ಸರ್ಕಾರಕ್ಕೆ ಬರೆಯಬಹುದು.

ವಿದ್ಯುತ್ ಬಿಲ್ಲುಗಳನ್ನು ಕಂರಿತಂ

೭೪೭ ಶ್ರೀ ಡಿ.ಎ ಚಿನ್ನಪ್ಪ, (ಮಡಿಕೇರಿ).—ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅತಿ ಹೆಚ್ಚಿನ ಮೊತ್ತದ ವಿದ್ಯುತ್ ಬಿಲ್ಲುಗಳು ಅನೇಕ ಕೈಗಾರಿಕೆಗಳಿಂದ ಬಾಕಿ ಇರುವುದು ನಿಜವೆ ;

ಆ) ಹಾಗಿದ್ದಲ್ಲಿ ಬಾಕಿ ಇರಿಸಿಕೊಂಡಿರುವ ಕೈಗಾರಿಕೆಗಳ ಹೆಸರು.

ಇ) ಬಾಕಿಯನ್ನು ವಸೂಲಿ ಮಾಡದಿರಲು ಕಾರಣಗಳೇನು ;

ಈ) ಈ ಕೈಗಾರಿಕೆಗಳ ಬಾಕಿಯನ್ನು ಮನ್ನಾ ಮಾಡಲು ಸರ್ಕಾರದವರು ಇಚ್ಛಿಸಿದ್ದಾರೆಯೆ.

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).—

ಅ) ಹೌದು.

ಆ) ಖಂ–೯–೧೯೯೯ರಲ್ಲಿರುವಂತೆ ಒಂದು ಲಕ್ಷಕ್ಕೂ ಮೀರಿ ಬಾಕಿಯುಳ್ಳ ಕೈಗಾರಿಕೆಗಳ ಹೆಸರುಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಮಂಡಳಿಯು ತನಗೆ ಬರಬೇಕಾದ ಬಾಕಿಯನ್ನು ಎಲೆಕ್ಟ್ರಿಸಿಟಿ ಸಪ್ಲೈ ರೆಗ್ಯೂಲೇಷನ್ಸ್, ಕೆ. ಇ. ಬಿ., (ರಿಕವರಿ ಆಫ್ ಡ್ಯೂಸ್) ಆಕ್ಟ್ ಮತ್ತು ಕೆ. ಇ. ಬಿ. (ರಿಕವರಿ ಆಫ್ ಡ್ಯೂಸ್) ರೂಲ್ ೧೯೭೬ರ ಪ್ರಕಾರ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

(ಈ) ಇಲ್ಲ.